Private Member's Bill and Resolutions.

Motion of leave to introduce the Mysore University (Amendment) Bill, 1969—Grant of

Sri L. SRIKANTAIAH.—I beg leave of the House to introduce the Mysore University (Amendment) Bill, 1969.

Mr. SPEAKER.—The question is :

"That leave be granted to Sri L. Srikantaiah to introduce the Mysore University (Amendment) Bill, 1969."

The motion was adopted.

Sri L. SRIKANTAIAH.—I introduce the Mysore University (Amendment) Bill, 1969.

Mr. SPEAKER.—The Mysore University (Amendment) Bill, 1969 is introduced.

I have received a telegram from Sri K. H. Patil that he is unable to attend the Session. In the absence of the Hon. Member, it is not possible to proceed with his Bill, *i.e.*, the Mysore Co-operative Societies (Amendment) Bill 1968. Therefore, it will be postponed.

Now, further discussion on Private Members Resolutions.

Resolution *re* : Changing of name of Mysore State as "Kannada Nadu"

(Debate Continued)

† **ಶ್ರೀ ಟಿ. ಆರ್. ಶಾಮಣ್ಣ.**— ಮಾನ್ಯ ಸಭಾಪತಿಗಳೇ, ಮಾನ್ಯ ಶ್ರೀಕಂಠಯ್ಯನವರು ಮೈಸೂರು ರಾಜ್ಯದ ಹೆಸರು ಕನ್ನಡ ನಾಡು ಆಗಬೇಕೆಂದು ಖಾಸಗಿ ನಿರ್ಣಯವನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈಗಾಗಲೇ ಹಿಂದೆ ನಾನು ಈ ನಿರ್ಣಯದ ಬಗ್ಗೆ ಕೆಲವು ವಿಷಯಗಳನ್ನು ಹೇಳಿದ್ದೇನೆ. ಮೈಸೂರು ರಾಜ್ಯಕ್ಕೆ ಮೈಸೂರು ಇರಬೇಕು ಎಂದು gentlemen's promise, ಆಗಿತ್ತು ಎಂದು ಆಗಲೇ ಹೇಳಿದ್ದೇನೆ. ಭಾಷಾವಾರು ಪ್ರಾಂತಗಳು ಆಗುವಾಗ ಈ ದೇಶಕ್ಕೆ ಸಾಕಾದಷ್ಟು ಅನಾಹುತಗಳು ಆಗಿವೆ. ಭಾಷಾವಾರು ಪ್ರಾಂತದಿಂದ ಯಾವ ವಿಧವಾದಂಥ ಪ್ರಯೋಜನವಾಗಲಿ, ಕ್ಷೇಮವಾಗಲಿ ನಮ್ಮ ದೇಶಕ್ಕೆ ಆಗಲಿಲ್ಲ. ಈಗ ಆಂಧ್ರ ದೇಶದಲ್ಲಿ ಆಂಧ್ರ ಮತ್ತು ತೆಲಂಗಾಣ ಬೇರೆ ಬೇರೆ ಆಗಬೇಕೆಂದು ಆಂಧ್ರೋಳನ ಶುರುವಾಗಿದೆ. ಅದರ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಮಹಾರಾಷ್ಟ್ರ ಗುಜರಾತ್ ವಿಭಾಗವಾದಾಗ ವಿದರ್ಭ ರಾಜ್ಯ ವಾಗಬೇಕೆಂದು ಚಳುವಳಿ ಶುರುವಾಗಿದೆ. ಈಗ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಏಕೆ ಇಟ್ಟಿಲ್ಲ ಎಂದು ಆಕ್ಷೇಪಿಸುವುದಾದರೆ ಮೈಸೂರು ಮತ್ತು ಕರ್ನಾಟಕ ಎನ್ನುವ ಎರಡು ಭಾಗಗಳು ಆಗಬೇಕು ಎಂದು ಆಂಧ್ರೋಳನ ಶುರುವಾಗುತ್ತದೆ. ಮೈಸೂರು ರಾಜ್ಯ ಬೇರ್ಪಡಿಸಬಹುದಾದಂಥ ದೊಡ್ಡ ಚಳುವಳಿ ಹುಟ್ಟುತ್ತದೆ ಎಂದು ಹೇಳುತ್ತೇನೆ. ಈ ಪ್ರಯೋಗಕ್ಕೆ ದಯವಿಟ್ಟು ಕೈಹಾಕಬೇಡಿ ಇದರಲ್ಲಿ ಇರತಕ್ಕದ್ದು ಬಹುಭಾಗ ಸೆಂಟಿಮೆಂಟಲ್ ಹೊರತು ಬೇರೆ ಯಾವ ವಿಧವಾದಂಥ ಪ್ರಯೋಜನ ಕಾಣಲಿಲ್ಲ ಎಂದು ತಿಳಿದುಕೊಂಡಿದ್ದೇನೆ. ಮೈಸೂರು ವಿಶಾಲ ಮೈಸೂರು ಆದಮೇಲೆ ಹಳೇ ಮೈಸೂರಿಗೆ ತೊಂದರೆಯಾಗಿದೆಯೇ ಹೊರತು ಯಾವ ವಿಧವಾದಂಥ ಹೆಚ್ಚಿನ ಪ್ರಗತಿಯಾಗಲಿ, ಸೌಖ್ಯವಾಗಲಿ ಉಂಟಾಗಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಯಾವ ವಿಚಾರ ತೆಗೆದು ಕೊಂಡರೂ ಕೂಡ ಹಳೇ ಮೈಸೂರಿನ ಹಿತಕ್ಕೆ ಧಕ್ಕೆ ಬಂದಿದೆಯೆಂದು ಹೇಳಿದರೆ ತಪ್ಪಾಗಲಾರದು.